**ದಿನಾಂಕಃ 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಃ 2 ನೇ ಎದುರುದಾರ ಪರ ಶ್ರೀ ಟಿ.ಜಿ.ಕೆ ವಕೀಲರಿಂದಃ**

ದಿನಾಂಕ 10-05-2017 ರಂದು ಅಪಘಾತವಾಗಿರುತ್ತದೆ. ನಾನು ಅಪಘಾತವನ್ನು ನೋಡಿರುತ್ತೇನೆ. ಸಾಕ್ಷಿ ಮುಂದುವರೆದು ಬೈಕನ್ನು ಮೃತ ವ್ಯಕ್ತಿ ನಡೆಸುತ್ತಿದನು. ಮೃತನು ನಡೆಸುತ್ತಿದ್ದ ವಾಹನದ ನಂಬರ ನನಗೆ ಗೊತ್ತಿರುವುದಿಲ್ಲ. ಅಪಘಾತವು ತಳವಾರಗೇರಾ ಗ್ರಾಮದಲ್ಲಿ ಆಗಿರುತ್ತದೆ. ಎದುರುಗಡೆಯಿಂದ ವಾಹನದ ನಂ.ಕೆಎ 48 ಹೆಚ್ 7792 ನೇ ವಾಹನ ಅಪಘಾತ ಪಡಿಸಿರುತ್ತದೆ. ಮೃತನು ತಾನು ನಡೆಸುತ್ತಿದ್ದ ವಾಹನವನ್ನು ಅತೀವೇಗವಾಗಿ ನಡೆಸಿಕೊಂಡು ಹೋಗಿ ಆತನ ತಪ್ಪಿನಿಂದಲೇ ಕೆಎ 48 ಹೆಚ್ 7792 ನೇದ್ದರ ವಾಹಕ್ಕೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಮೃತನು ವಾಹನ ಚಾಯಿಸುವಾಗ ಹೆಲ್ಮೆಟ್ ಹಾಕಿದ್ದನು. ಸದರಿ ಹೆಲ್ಮೆಟ್ಟನ್ನು ಪೋಲೀಸರು ಜಪ್ತಿಪಡಿಸಿಕೊಂಡಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಕೆಎ 48 ಹೆಚ್ 7792 ನೇದ್ದರ ವಾಹನದ ಚಾಲಕನದು ಯಾವುದೇ ತಪ್ಪು ಇರುವುದಿಲ್ಲ, ಮೃತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ಖಾಸಿಂಸಾಬನ ವಿರುದ್ಧ ಪೋಲೀಸರು ಅಂತಿಮ ವರದಿ ಹಾಕಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 3 ನೇ ಎದುರುದಾರ ಪರ ಶ್ರೀ ಆರ್ ಎನ್ ಡಿ ವಕೀಲರಿಂದಃ**

ಸದರಿ ಅಪಘಾತವು ಮೃತನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿ. ಮೃತ ಖಾಸಿಂಸಾಬ ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದನು ಎಂದರೆ ಸರಿ. ಪೋಲೀಸರು ಖಾಸಿಂಸಾಬನ ಮೇಲೆ ಹಾಕಿದ ಅಂತಿಮ ವರದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯೂ ಃ 2

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.